ತಮ್ಮ ಕಣ್ಣು ಮುಚ್ಚಿಕೊಂಡೂ ಸುಂದರ ಕುದುರೆಯ ಚಿತ್ರ ಬಿಡಿಸಬಲ್ಲರು. ಇದನ್ನು ಬರೆಯುವಾಗ ನಾನು ಲೇಖಕ ವೃತ್ತಿಯ ಬಗ್ಗೆ, ನನ್ನದೇ ಬದುಕಿನ ಬಗ್ಗೆ ಹೇಳುತ್ತಿದ್ದೆ. ಲೇಖಕ ತನ್ನದೇ ಕಥೆ ಹೇಳುವುದಿದ್ದರೆ, ಅದು ಬೇರೆಯವರ ಕಥೆ ಅನ್ನುವ ಹಾಗೆ ನಿಧಾನವಾಗಿ ಹೇಳುವುದಿದ್ದರೆ, ಕಥೆಯ ಶಕ್ತಿ ತನ್ನೊಳಗೇ ಮೈದುಂಬಿಕೊಳ್ಳುತ್ತಿರುವುದನ್ನು ಅನುಭವಿಸುವುದಿದ್ದರೆ, ಮೇಜಿನ ಮುಂದೆ ಕೂತು ತನ್ನ ಕಲೆಗೆ ಕೌಶಲ್ಯಕ್ಕೆ ತಾಳ್ಮೆಯಿಂದ ತೆತ್ತುಕೊಳ್ಳುವುದಿದ್ದರೆ, ಮೊದಲು ಅವನಲ್ಲಿ ಭರವಸೆ ಇರಬೇಕು. ಕೆಲವರನ್ನು ನಿಯಮಿತವಾಗಿ ಭೇಟಿಮಾಡುವ, ಕೆಲವರನ್ನು ಎಂದೂ ಭೇಟಿಮಾಡಲು ಹೋಗದ ಸ್ಫೂರ್ತಿ ದೇವತೆ ಇಂಥ ಭರವಸೆ ಇರುವವರನ್ನು, ವಿಶ್ವಾಸ ಇರುವವರನ್ನು ಇಷ್ಟಪಡುತ್ತಾಳೆ. ಲೇಖಕ ತಾನು ತೀರ ಒಬ್ಬಂಟಿ ಅಂದುಕೊಳ್ಳುತ್ತಿರುವಾಗ, ತನ್ನ ಪ್ರಯತ್ನ, ಕನಸು, ತನ್ನ ಬರವಣಿಗೆಯ ಮೌಲ್ಯಗಳ ಬಗ್ಗೆ ಶಂಕೆಪಡುತ್ತಿರುವಾಗ, ಇದು ತನ್ನ ಕಥೆ ಮಾತ್ರ ಅಂದುಕೊಳ್ಳುತ್ತಿರುವಾಗ, ಸ್ಫೂರ್ತಿ ದೇವತೆಯು ಅವನು ಕಟ್ಟಲು ಬಯಸುವಂಥ ಲೋಕಕ್ಕೆ ತಕ್ಕದಾದ ಕಥೆ, ಪ್ರತಿಮೆ, ಕನಸುಗಳು ಲೇಖಕನಿಗೆ ಕಾಣುವಂತೆ ಮಾಡುತ್ತಾಳೆ, ನನ್ನ ಇಡೀ ಬದುಕನ್ನು ತೆತ್ತು ಬರೆದಿರುವ ಪುಸ್ತಕಗಳನ್ನು ನೆನೆದುಕೊಂಡಾಗ ನನಗೆ ಉನ್ಮತ್ತ ಆನಂದವನ್ನು ನೀಡಿದ ವಾಕ್ಯ, ಕನಸು, ಪುಟಗಳು ನನ್ನ ಕಲ್ಪನೆಯಲ್ಲಿ ಮೂಡಿದ್ದಲ್ಲ, ಇನ್ಯಾವುದೋ ಶಕ್ತಿ ಉದಾರವಾಗಿ ನನಗೆ ಕೊಡುಗೆಯಾಗಿ ನೀಡಿದ್ದು ಅನ್ನಿಸುತ್ತದೆ.

ನಮ್ಮಪ್ಪನ ಸೂಟ್‌ಕೇಸು ತೆರೆದು ನೋಟ್‌ಬುಕ್ಕುಗಳನ್ನು ಓದಲು ಅಂಜುತ್ತಿದ್ದೆ. ಯಾಕೆಂದರೆ ನಾನು ಅನುಭವಿಸಿದ ಕಷ್ಟಗಳನ್ನು ನಮ್ಮಪ್ಪ ಒಪ್ಪುತ್ತಿರಲಿಲ್ಲ, ಸಹಿಸುತ್ತಿರಲಿಲ್ಲ ಅನ್ನುವುದು ಗೊತ್ತಿತ್ತು. ಏಕಾಂತವಲ್ಲ, ಗೆಳೆಯರ ಒಡನಾಟ, ಜನರ ಗುಂಪು, ಜೋಕು ನಮ್ಮಪ್ಪನಿಗೆ ಇಷ್ಟ ಅನ್ನುವುದು ಗೊತ್ತಿತ್ತು. ಆದರೆ ನನ್ನ ಯೋಚನೆ ಬೇರೆ ದಿಕ್ಕಿಗೆ ತಿರುಗಿತು. ನನ್ನಲ್ಲಿ ಮೂಡಿದ್ದ ಆಲೋಚನೆ, ವೈರಾಗ್ಯ, ಸಹನೆಯ ಕನಸು ಇವೆಲ್ಲವೂ ಲೇಖಕನಾಗಿ ನನ್ನ ಅನುಭವ ಮತ್ತೆ ನನ್ನದೇ ಬದುಕಿನ ಕ್ರಮಗಳಿಂದ ಮೂಡಿದ್ದ ಪೂರ್ವಗ್ರಹಗಳು ಅನ್ನಿಸಿತು. ಜನರ ಗುಂಪು, ಸಂಸಾರ ತಾಪತ್ರಯ, ಗೆಳೆಯರ ಕಂಪನಿ, ಖುಷಿ ಹರಟೆಗಳ ನಡುವೆ ಇದ್ದುಕೊಂಡೇ ಬರೆದ ಪ್ರಖರ ಲೇಖಕರು ಅನೇಕರಿದ್ದಾರೆ. ನಾವು ಹುಡುಗರಾಗಿದ್ದಾಗ ನಮ್ಮಪ್ಪ ಸಂಸಾರದ ಏಕತಾನತೆಗೆ ಬೇಸತ್ತು ನಮ್ಮನ್ನೆಲ್ಲ ಬಿಟ್ಟು ಪ್ಯಾರಿಸ್‌ಗೆ ಹೋಗಿ, ಎಷ್ಟೋ ಲೇಖಕರು ಮಾಡುವ ಹಾಗೆ ಅಲ್ಲಿನ ಹೋಟೆಲ್ ರೂಮಿನಲ್ಲಿ ಕೂತು ನೋಟ್‌ಬುಕ್ಕುಗಳನ್ನು ಬರೆದು ತುಂಬಿಸಿದ್ದರು. ಆ ನೋಟ್‌ಬುಕ್ಕುಗಳೂ ಸೂಟ್‌ಕೇಸಿನಲ್ಲಿ ಇವೆ ಅನ್ನುವುದು ಗೊತ್ತಿತ್ತು. ಯಾಕೆಂದರೆ ಆ ಸೂಟ್‌ಕೇಸನ್ನು ನನ್ನ ಹತ್ತಿರ ತರುವುದಕ್ಕೆ ಕೆಲವು ವರ್ಷ ಮೊದಲೇ ನಮ್ಮಪ್ಪ ತಮ್ಮ ಬದುಕಿನ ಆ ದಿನಗಳ ಬಗ್ಗೆ ನನ್ನ ಹತ್ತಿರ ಮಾತಾಡುವುದಕ್ಕೆ ಶುರು ಮಾಡಿದ್ದರು. ನಾನಿನ್ನೂ ಚಿಕ್ಕಮಗುವಾಗಿದ್ದಾಗಲೇ ನಮ್ಮಪ್ಪ ಆ ದಿನಗಳ ಬಗ್ಗೆ ಮಾತಾಡಿದ್ದರೂ ತಮ್ಮ ದೌರ್ಬಲ್ಯ, ಲೇಖಕನಾಗಬೇಕೆಂಬ ಕನಸು, ಹೋಟೆಲ್ ರೂಮಿನಲ್ಲಿ ಕಾಡಿದ್ದ ತನ್ನತನದ ಪ್ರಶ್ನೆ ಇವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಪ್ಯಾರಿಸ್ ರಸ್ತೆಯಲ್ಲಿ ಸಾರ್ತ್ರೆಯನ್ನು ಕಂಡದ್ದು, ತಾವು ಓದಿದ ಪುಸ್ತಕ, ನೋಡಿದ ಸಿನಿಮಾ ಇವನ್ನೆಲ್ಲ ಹೇಳಿದ್ದರು. ಬಹುಮುಖ್ಯವಾದ ಸುದ್ದಿ ಹೇಳುವವರಲ್ಲಿ ಇರುವಂಥ ಉನ್ಮತ್ತ ಪ್ರಾಮಾಣಿಕತೆ ಅವರ ದನಿಯಲ್ಲಿರುತ್ತಿತ್ತು. ಪಾಶಾಗಳ ಬಗ್ಗೆ, ಮಹಾನ್ ಧಾರ್ಮಿಕ ನಾಯಕರ ಬಗ್ಗೆ ಹೇಳುವುದಕ್ಕಿಂತ ಹೆಚ್ಚಾಗಿ ಜಗತ್ತಿನ ಲೇಖಕರ ಬಗ್ಗೆ ಮಾತಾಡುತ್ತಿದ್ದ ನಮ್ಮಪ್ಪನಿಗೆ ಕೃತಜ್ಞನಾಗಿರಬೇಕು ಅನ್ನುವುದನ್ನು ನಾನು ಲೇಖಕನಾದ ಮೇಲೆ ಎಂದೂ ಮರೆತಿಲ್ಲ. ಹಾಗಾದರೆ, ನಮ್ಮಪ್ಪನ ದೊಡ್ಡ ಲೈಬ್ರರಿಗೆ ನಾನೆಷ್ಟು ಋಣಿ ಅನ್ನುವುದನ್ನು ನೆನಪಿಟ್ಟುಕೊಂಡೇ ಅಪ್ಪನ ನೋಟ್‌ಬುಕ್ಕುಗಳನ್ನು ಓದಬೇಕು. ನಮ್ಮಪ್ಪ ನಮ್ಮೊಟ್ಟಿಗೆ ಇದ್ದಾಗ ಅವರೂ ನನ್ನ ಹಾಗೇ